LESS NUMBER OF QUESTIONS INCLUDED IN THE QUESTION LIST

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಪ್ರಶ್ನೋತ್ತರ ವೇಳೆ ನಮ್ಮ ಹಕ್ಕು. ಈಗ ತಾವು 2 ನಿಮಿಷಗಳಲ್ಲಿ ೭ ಪ್ರಶ್ನೋತ್ತರಗಳನ್ನು ಮುಗಿಸುತ್ತಿದ್ದೀರಿ. ಯಾವ ಕಾರಣದಿಂದ ತಾವು ಇವತ್ತು 5 ಪ್ರಶ್ನೆಗಳನ್ನು ಮಾತ್ರ ಹಾಕಿದ್ದೀರಿ, ಎಂಬುದನ್ನು ಈ ಸಭೆಗೆ ತಿಳಿಸಬೇಕು. ಸರ್ಕಾರದವರು ಏನಾದರೂ ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಿಕೊಟ್ಟಿಲ್ಲವೇ ? ಯಾವ ಕಾರಣಕ್ಕಾಗಿ ಇವತ್ತು 5 ಪ್ರಶ್ನೆಗಳನ್ನು ಮಾತ್ರ ಹಾಕಿದ್ದೀರಿ ಎಂಬುದನ್ನು ಈ ಸಭೆಗೆ ತಿಳಿಸಬೇಕು.

ಅಧ್ಯಕ್ಷರು.—ನಾನು ಆ ಹೊತ್ತು ಎಷ್ಟು ಪ್ರಶ್ನೆಗಳು ಬಂದಿದ್ದವು, ಎಷ್ಟು ಪ್ರಶ್ನೆಗಳಿಗೆ ಉತ್ತರ ಆಗಿದೆ ಎಷ್ಟು ಬಾಕಿ ಇದೆ ಎನ್ನುವುದನ್ನು ಹೇಳಿದ್ದೇನೆ. ಇವತ್ತು ನಮ್ಮಲ್ಲಿ 10 ಪ್ರಶ್ನೆಗಳಿಗೆ ಉತ್ತರ ಬಂದಿದ್ದು ಇತ್ತು. ಆದ್ದರಿಂದ ನಾಳೆಗೆ 5 ಪ್ರಶ್ನೆಗಳನ್ನು ಇಟ್ಟುಕೊಂಡು ಇವತ್ತು 5 ಪ್ರಶ್ನೆಗಳನ್ನು ಹಾಕಿದ್ದೇವೆ. ಇನ್ನೂ 144 ಪ್ರಶ್ನೆಗಳು ಉತ್ತರ ಆಗಬೇಕು. ಎಲ್ಲಾ ಡಿಪಾರ್ಟ್‌ಮೆಂಟ್ ವೈಜ್ ಬೇಕಾದರೆ ಹೇಳುತ್ತೇನೆ. ಒಟ್ಟು 144 ಪ್ರಶ್ನೆಗಳು ಉತ್ತರ ಆಗಬೇಕು.

ಶ್ರೀ ಜೆ. ಎಲ್. ಕದಾಡಿ.—ಪ್ರಶ್ನೆಗಳಿಗೆ ಉತ್ತರವನ್ನು ತರಿಸುವುದಕ್ಕೆ ಅಧ್ಯಕ್ಷರು ಪ್ರಯತ್ನ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯು ನಿಯಮಾವಳಿಯ ಪ್ರಕಾರ 15 ದಿವಸಗಳಲ್ಲಿ ಪ್ರಶ್ನೆಗೆ ಉತ್ತರ ಬಾರದಿದ್ದರೆ ಸರ್ಕಾರವನ್ನು ಅಧ್ಯಕ್ಷರು ಕೇಳಬೇಕಾಗುತ್ತದೆ. 15 ದಿವಸಗಳ ಒಳಗೆ ಸರ್ಕಾರದವರು ಉತ್ತರವನ್ನು ಕಳುಹಿಸುವುದಕ್ಕೆ ತೊಂದರೆ ಆದರೆ ಮತ್ತೆ ಸರಕಾರ ತನ್ನು ಅನುಮತಿಯನ್ನು ಪಡೆಯಬೇಕಾಗುತ್ತದೆ. ಇಂಥಾ ಕಾರಣಕ್ಕೋಸ್ಕರ ಉತ್ತರವನ್ನು ಕಳುಹುವ ವುದಕ್ಕೆ ತೊಂದರೆಯಾಯಿತೆಂದು ಸರ್ಕಾರದವರು ತಮ್ಮನ್ನು ಕೇಳಿಕೊಳ್ಳಬೇಕು. ಹೀಗಿರುವಲ್ಲಿ ತಮಗೆ ಉತ್ತರ ಬಂದಿರತಕ್ಕ ಪ್ರಶ್ನೆಗಳನ್ನು ಕ್ವೆಶ್ಚನ್ ಲಿಸ್ಟ್‌ನಲ್ಲಿ ಸೇರಿಸುವುದಕ್ಕೆ ಇರತಕ್ಕಅಡ್ಡಿ ಏನು ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಸೇರ್ಪಡೆ ಮಾಡುವುದಕ್ಕೆ ಅಡ್ಡಿಯೇನೂ ಇಲ್ಲ. ಈಗ ಕಳುಹಿಸಿರತಕ್ಕ ಪ್ರಶ್ನೆಗಳಿಗೆ ಉತ್ತರ ಬರಬೇಕು ಅದಕ್ಕೋಸ್ಕರ ಸೇರಿಸುತ್ತಿಲ್ಲ. ಕೆಲವು ಸಂದರ್ಭಗಳಲ್ಲಿ ಕಾಲಾವಕಾಶವನ್ನು ಕೇಳಿರುವುದು ಉಂಟು. ಅದಕ್ಕಾಗಿ ನಮ್ಮ ಸೆಕ್ರೆಟೇರಿಯಟ್‌ನಿಂದ ರಿಮೈಂಡರನ್ನು ಕಳುಹಿಸಿದ್ದಾರೆ. ಎಷ್ಟೇ ಪ್ರಯತ್ನ ಪಟ್ಟರೂ ಕೂಡ ಪ್ರಶ್ನೆಗಳಿಗೆ ಉತ್ತರಗಳು ಬರುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ —ನಾವು ಈ ಬಗ್ಗೆ ಸರ್ಕಾರದಿಂದ ಉತ್ತರವನ್ನು ಅಪೇಕ್ಷಿಸುತ್ತೇವೆ. ಮುಂದಿನ ಕಾರ್ಯಕಲಾಪಗಳು ಕಾಲಿಂಗ್ ಅಟೆನ್‌ಷನ್ ಇವೆಲ್ಲವೂ ನಿಲುಗಡೆಯಾಗಬೇಕು. ನಿಮ್ಮ ಮರ್ಜಿಯಲ್ಲಿ ನಾವು ಕೆಲಸ ಮಾಡುವುದಕ್ಕೆ ಬಂದಿಲ್ಲ. ಈ ರೀತಿ ಸರ್ಕಾರ ವರ್ತನೆ ಮಾಡುವುದು ಸರಿಯಲ್ಲ. Whatever be the conclusion, I want to know the mind of the Government.

ಶ್ರೀ ಬಿ. ಪುಟ್ಟಸ್ವಾಮಿಯ್ಯ.—15 ದಿವಸಗಳೊಳಗಾಗಿ ಪ್ರಶ್ನೆಗೆ ಉತ್ತರ ಬಾರದಿದ್ದರೆ ತಾವು ಕಟ್ಟುನಿಟ್ಟಾದ ಕ್ರಮತೆಗೆದುಕೊಳ್ಳದಿದ್ದರೆ ನಿಸ್ಸಹಾಯಕರಾಗಬೇಕಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಈಗ ಇರುವ ರೂಲ್ಸ್ ಪ್ರಕಾರ 15 ದಿವಸಗಳೊಳಗಾಗಿ ಪ್ರಶ್ನೆಗೆ ಉತ್ತರವನ್ನು ಕಳುಹಿಸಬೇಕು. 15 ದಿವಸಗಳೊಳಗಾಗಿ ಉತ್ತರವನ್ನು ಕಳುಹಿದಿದ್ದರೆ ಏತಕ್ಕೋಸ್ಕರ ತಡಮಾಡುತ್ತಿದ್ದಾರೆ, ಯಾರು ತಡಮಾಡುತ್ತಿದ್ದಾರೆ ಎಂಬುದನ್ನು ತಿಳಿದು ಅವರ ಮೇಲೆ ಕ್ರಮತೆಗೆದುಕೊಳ್ಳಬೇಕು ಎಂದು ನಾವು ಅನೇಕ ಸಾರಿ ಚೀಫ್ ಸೆಕ್ರೆಟರಿಯವರಿಗೆ ತಿಳಿಸಿದ್ದೇವೆ. ಯಾವ ಆಫೀಸಿನಲ್ಲಾಗಲೀ, ಸೆಕ್ರೆಟೇರಿಯಟ್‌ನಲ್ಲಾಗಲೀ ಇಷ್ಟ ದಿವಸ ತಡ ಮಾಡಿದರೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ. ಆ ರೀತಿ ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸದೆ ತಡೆಹಿಡಿಯುವುದು ಸರಿಯಲ್ಲ. ಏತಕ್ಕೆ ಆ ರೀತಿ ಮಾಲಿಗಿಕೊಳ್ಳುತ್ತಾರೆ ಅದಕ್ಕೆ ಕಾರಣವೇನೆಂಬುದನ್ನು ತಿಳಿದುಕೊಳ್ಳಬೇಕೆಂದು ತಿಳಿಸಿದ್ದೇವೆ. ಆದ್ದರಿಂದ ಸರ್ಕಾರದವರು ಈ ವಿಚ್ಚಾರದಲ್ಲಿ ಅಲಕ್ಷ್ಯ ಮಾಡಿಲ್ಲ. ಎರಡು ಮೂರು ಸಾರಿ ನಾವು ಇದನ್ನು ಯೋಜನೆ ಮಾಡಿದ್ದೇವೆ. ಅನೇಕ ಸಾರಿ ಈ ಬಗ್ಗೆ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಆದ್ದರಿಂದ ಈಗ ನಾನು ತಮ್ಮ ಕ್ಷಮಾಪಣೆ ಕೇಳುತ್ತೇನೆ. ಆದಷ್ಟು ಬ್ಯಾಗತೆ ಈ ಪ್ರಶ್ನೆಗಳಿಗೆ ಉತ್ತರವನ್ನು ತರಿಸಿಕೊಡುತ್ತೇನೆ. ಯಾವ ಪ್ರಶ್ನೆಗೆ ಉತ್ತರ ಬಂದಿಲ್ಲ ಎಂಬುದನ್ನು ಕಳುಹಿಸಬೇಕು.

(ಶ್ರೀ ಎಚ್. ಸಿದ್ಧವೀರಪ್ಪ)

1-30 P.M.

ಅವಕ್ಕೋಸ್ಕರ ತಮಗೆ ತಿಳಿಸುವುದೇನೆಂದರೆ, ಪ್ರಶ್ನೆಗಳಿಗೆ ಉತ್ತರ ಬರಲಿ, ಬಾರದೇ ಇರಲಿ ಒಂದು ಸಾರಿ ನೋಟಿಸ್ ಕೊಟ್ಟುಅದನ್ನು ಇನ್‌ಕ್ಲೂಡ್ ಮಾಡಿದರೆ ಆಗರಾವರೂ ಕೆಲವು ಸೆಕ್ಟೆರಿಗಳಿಗೆ ಅರಿವಾಗುತ್ತೆ. ಪ್ರಶ್ನೆಗೆ ಉತ್ತರ ಬರುವವರೆಗೂ ಕಾಯುವುದಕ್ಕಾಗಿಲ್ಲ ಎಂದು ನನ್ನ ಸಲಹೆ. ಚೀಫ್ ಸೆಕ್ರೆಟರಿಯವರಿಗೆ, ಯಾವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲವೋ ಆ ಪ್ರಶ್ನೆಗಳಿಗೆ ಜಾಗ್ರತೆ ಉತ್ತರ ಬರಲು ಏರ್ಪಾಡು ಮಾಡುವಂತೆ ತಿಳಿಸುತ್ತೇನೆ. ಇದು ಒಂದೇ ಕಾರಣದಿಂದ ಮುಂದಕ್ಕೆ ಹಾಕಬೇಕು ಎನ್ನುವ ವಾದವನ್ನು ದಯವಿಟ್ಟು ಬಿಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ ಸೆಷನ್ ನಡೆಯುತಕ್ಕ ಕಾಲದಲ್ಲಿ ಈ ಸಭೆಯ ಕಾರ್ಯಕಲಾಪಗಳನ್ನು ನೋಡಿಕೊಳ್ಳುವುದಕ್ಕೆ ಪಾರ್ಲಮೆಂಟರಿ ಅಫೇರ್ಸ್ ಮಂತ್ರಿಗಳಿದ್ದಾರೆ. ಪ್ರಶ್ನೆಗಳಿಗೆ ಉತ್ತರ ಸಕಾಲದಲ್ಲಿ ಬರುವಂತೆ ಮಾಡತಕ್ಕ ಮತ್ತು, ಅದನ್ನು ನಿಯಂತ್ರಿಸತಕ್ಕ ಜವಾಬ್ದಾರಿ ಪಾರ್ಲಮೆಂಟರಿ ಅಫೇರ್ಸ್ ಮಿನಿಸ್ಟ್ರಿಗೆ ಸೇರಿರತಕ್ಕ ವಿಷಯ. ಬಹುತ: ಸರ್ಕಾರದಿಂದ ಸಕಾಲಕ್ಕೆ ಪ್ರಶ್ನೆಗಳಿಗೆ ಉತ್ತರಗಳು ಬಾರದೇ ಇದ್ದರೆ ಆ ಸಚಿವರ ಲೋಪವೂ ಹೌದು ಮತ್ತು ಇದರಿಂದ ಆ ಸಚಿವಶಾಖೆ ಸಾಕಷ್ಟು ಸವಲತ್ತನ್ನು ನಮಗೆ ಕೊಡುತ್ತಾ ಇಲ್ಲ ಎನ್ನುವದು ಸ್ಪಷ್ಟವಾಗುತ್ತದೆ. ಆದುದರಿಂದ ನಾವು ಇವತ್ತು ಆ ಸಚಿವರ ಮೇಲೆ ಗುರುತರವಾದ ಆಪಾದನೆಯನ್ನು ಮಾಡಬೆಕಾಗಿದೆ ಶಾಸನಸಭೆ ಸೇರಿ ಕೆಲಸ ಮಾಡಬೇಕಾದರೆ ಕನಿಷ್ಟ 10 ಪ್ರಶ್ನೆಗಳು ಬರಲೇ ಬೇಕು. ಪ್ರಶ್ನೆಗಳು ಇದ್ದರೂ ಕೂಡ ಉತ್ತರ ಬಾರದೇ ಸಭೆಯ ಮುಂದೆ ಬಂದಿಲ್ಲ. ಮರ್ಯಾದೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಉತ್ತರ ಬಂದಿರುವ 10 ಪ್ರಶ್ನೆಗಳನ್ನು ಇವತ್ತು ಹಾಕಿಬಿಟ್ಟರೆ ನಾಳೆಗೆ ಪ್ರಶ್ನೆ ಇಲ್ಲ. ಉತ್ತರ ಬಾರದೇ ಪ್ರಶ್ನೆಗಳಿಲ್ಲ ಎನ್ನುವ ಹೆಚ್ಚಿಬರಹಕ್ಕೆ ತಂದಿಟ್ಟಿದ್ದಾರೆ ಎಂದು ಹೇಳಿದರೆ, ತಪ್ಪಾಗುವುದಿಲ್ಲವೆಂದು. ಸಂಬಂಧಪಟ್ಟ ಸಚಿವರು ಏನಾದರೂ ಸ್ವಲ್ಪ ಈ ಸದನದ ಕಾರ್ಯಕ್ರಮದಲ್ಲಿ ಜವಾಬ್ದಾರಿಯಿಂದ ವಹಿಸಿದ್ದರೆ ಈ ರೀತಿ ಆಗುತ್ತಾ ಇರಲಿಲ್ಲ. ಅವಕಾಶ ದಯವಿಟ್ಟು ಇದನ್ನು ವಿಚಾರ ಮಾಡಬೇಕು. ಇದನ್ನು ನಾವು ಸಹಿಸುವುದಕ್ಕೆ ಸಾಧ್ಯವಿಲ್ಲ ಅನೇಕ ಪ್ರಶ್ನೆಗಳು ಇಂದಿನ ಶಾಸನಸಭೆಯ ಕಾಲದಲ್ಲಿ ಕೊಟ್ಟಿರತಕ್ಕದ್ದಲ್ಲ. ಹಿಂದಿನ ಸೆಷನ್‌ನಲ್ಲಿ ಕೊಟ್ಟಿರತಕ್ಕಂಥ ಮತ್ತು ಆಡಿಟ್ ಆಗಿರತಕ್ಕಂಥ ಪ್ರಶ್ನೆಗಳೂ ಬಾಗೇ ಇವೆ. ಇಷ್ಟು ದಿವಸವಾದರೂ ಉತ್ತರಗಳನ್ನು ಸರ್ಕಾರದಲ್ಲಿ ಕಳುಹಿಸಿಕೊಡಲಿಲ್ಲ ಎಂದರೆ, ಇದಕ್ಕೆ ಸಂಬಂಧಪಟ್ಟ ಮೇಲ್ಪಚಾರಣೆ ಶಾಖೆ ಜೀವಂತ ಇದಯೇ ಅಥವಾ ಜೀವಂತವಾಗಿಲ್ಲವೇ ಎನ್ನುವ ಪ್ರಶ್ನೆ ಇದೆ. ಆದುದರಿಂದ ಪಾರ್ಲಮೆಂಟರಿ ಸಚಿವಶಾಖೆಯನ್ನು ಕಿತ್ತುಹಾಕುವುದು ಒಳ್ಳೆಯದು. ಅದರ ಹೊರ್ಟಾಫೋಲಿಯೋವನ್ನು ಕಿತ್ತು ಹಾಕುವುದು ಒಳ್ಳೆಯದು. ಇದು ಈ ಸದನದ ಹಕ್ಕು ಬಾಧ್ಯತೆ ಪ್ರಶ್ನೆ ಇದೆ. ಲಘುವಾಗಿ ಭಾರಿಸತಕ್ಕ ಪ್ರಶ್ನೆಯಲ್ಲ. ಇವತ್ತು ಸರ್ಕಾರ ತಮ್ಮನ್ನು ಇಕ್ಕಟ್ಟಿಗೆ ತಂದಿಡಬಹುದಿದೆಯೆಂದು ಉಹಿಸಬಹುದು. ಶಾಸನಸಭೆಯ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕು ಎನ್ನುವ ಆಸೆ ಇದ್ದಿದ್ದರೆ ಅದಕ್ಕೆ ವ ವಸ್ಥೆ ಮಾಡುತ್ತಿದ್ದರು. ಅವರ ವರ್ತನೆಯನ್ನು ನೋಡಿದರೆ ಶಾಸನಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಇಲ್ಲ ಎಂದು ಕಾಣುತ್ತದೆ. ಹಾಗಿದರೆ ಶಾಸನಸಭೆಯನ್ನು ಒಂದು ವಾರ ಕಾಲ ಮುಂದುವರೆಸಬೇಕಾದ ಅಗತ್ಯ ಇರಲಿಲ್ಲ, ನಮ್ಮಂತೂ ಮುಂದುವರಿಸಿ ಎಂದ ಕೇಳಿಲ್ಲ. ಸರ್ಕಾರದ ಮತಿಯಿಂದ ಶಾಸನ ಸಭೆಯನ್ನು ಒಂದು ವಾರ ಕಾಲ ಮುಂದುವರೆಸಿದ್ದಾರೆ. ಅದಕ್ಕೆ ಬೇಕಾದಂಥ ವ್ಯವಸ್ಥೆ ಮಾಡಲಿಲ್ಲ ಎಂದರೆ, ಮುಂದುವರೆಸುವ ಕಾರಣವಾದರೂ ಏನು ಎಂದು ಗೊತ್ತಾಗಲಿಲ್ಲ. ಇವತ್ತು ಸರ್ಕಾರಕ್ಕೆ ಮಾರಲ್ ರೈಟ್ ಉಳಿದಿಲ್ಲ. ಶಾಸನ ಸಭೆಯನ್ನು ನಡೆಸುವಾಗ ಸಾಕಷ್ಟು ಮಾಹಿತಿ ಒದಗಿಸದೇ ಇರುವುದು ಅಪ್ಪಟ ಚೆನ್ನಾಗಿ ಕಾಣುವುದಿಲ್ಲ. ದಯವಿಟ್ಟು ಇದನ್ನು ಮುಂದುವರೆಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ ಎಂದು ನಾನಾದರೂ ತಿಳಿದಿದ್ದೇನೆ. ಶ್ರೀವಾನ್ ಕಾಗೋಡು ತಿಮ್ಮಪ್ಪನವರು, ಸರ್ಕಾರ ಸಮರ್ಪಕವಾಗಿ ಕಲಸ ಮಾಡುತ್ತಾ ಇಲ್ಲ ಎಂದು ಹೇಳಿದ್ದನ್ನು ಸ್ವಲ್ಪ ಒಪ್ಪಿಕೊಳ್ಳುವುದು ಕಷ್ಟ. ಇದಕ್ಕೆ ಏನು ಕಾರಣ ಎನ್ನುವುದನ್ನು ಯೋಚನೆ ಮಾಡೋಣ. ನನಗೆ ತಿಳಿದಮಟ್ಟಿಗೆ, ನನ್ನ ಅನುಭವದಲ್ಲಿ, ಕೊಶ್ಚನ್ಸ್, ಕಾಲಿಂಗ್ ಅಟೆನ್‌ಷನ್ಸ್, ಮೋಷನ್ಸ್ ಈ ಸೆಷನ್‌ನಲ್ಲಿ ಬಂದ ಹಾಗೆ, ಹಿಂದೆ ಯಾವ ಸೆಷನ್‌ನಲ್ಲೂ

ಬಂದಿರಲಿಲ್ಲ. ತುಂಬ ಇಡೀ ಸೆಷನ್ಸ್‌ಗೆ 10-15-20 ಕಾಲ್ ಅಟೆಂಷನ್ಸ್ ಬರುತ್ತಿದ್ದುವು. ಈಗ ಕನಿಷ್ಠ ಅಂದರೆ ಒಂದು ದಿವಸಕ್ಕೆ 2-3 ಕಾಲ್ ಅಟೆಂಷನ್ಸ್ ಹಾಕಿರ್ತಾರೆ. ಇದಕ್ಕೆ ಉತ್ತರ ಬಾರದೆ ಇದರೆ ಕ್ಷಮಾರ್ಹ ಎಂದು ನಾನು ಹೇಳುವುದಿಲ್ಲ. It is the duty of the Government to collect information. We have got such a huge Machinery. If we have failed in our efforts, we must admit that we have failed. I do not know what is wrong with these people. The Chief Secretary is whipping them. He has been requested to see that all the Departments send the replies early, and if they fail in their duty to take such disciplinary action as he deems necessary. I request the hon. members to bear with the Government. I think we have been scheduled to meet for the whole of this week and we will see that as many replies as possible are made available. I am sending a note to the Chief Secretary to attend to it promptly.

ಶ್ರೀ ಕೋಣಂದೂರು ಲಿಂಗಪ್ಪ.— ಮಾನ್ಯ ಸಿದ್ದವೀರಪ್ಪನವರು ಒಳ್ಳೆಯ ಭಾಷೆಯಲ್ಲಿ ಹೇಳಿದರು. ಈ ಸೆಷನ್‌ನಲ್ಲಿ ಮಾತ್ರವಲ್ಲ ಕಳೆದ 2 ವರ್ಷಗಳೆಂದಲೂ ಸರ್ಕಾರ ಇವೇ ರೀತಿ ಈ ಸದನದ ಕಾರ್ಯಕಲಾಪಗಳ ಬಗ್ಗೆ ಸಂಪೂರ್ಣವಾದಂಥ ನಿರಾಸಕ್ತಿಯನ್ನು ತೋರಿಸುತ್ತಿದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ಕೂಡ ಅಷ್ಟು ಆಸಕ್ತಿಯನ್ನು ವಹಿಸಿದ ಹಾಗೆ ಕಾಣಲಿಲ್ಲ. ಇದು ಸರ್ಕಾರ ಶಾಸನಸಭೆಗೆ ಮಾಡುತ್ತಾ ಇರಕ್ಕೆ ಲೋಪವಾಗಿದೆ, ಆದುದರಿಂದ ಸರ್ಕಾರ ರಾಜಿನಾಮೆ ಕೊಡಬೇಕು, ಇಲ್ಲವೇ ಹೋದರೆ ಕನಿಷ್ಠ ಪಕ್ಷ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರಾದರೂ ರಾಜಿನಾಮೆ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.— ತಾವು ಇವತ್ತು 5 ಪ್ರಶ್ನೆ ತಗೆದುಕೊಂದಿದ್ದೇವೆ, ನಾಳೆಗೆ 5 ಪ್ರಶ್ನೆ ಇಟ್ಟುಕೊಂಡಿದ್ದೇವೆ ಎಂದು ಹೇಳಿದಿರಿ, ಬಾಕಿಯುದು.....

ಅಧ್ಯಕ್ಷರು.— ಇವತ್ತು ಸಾಯಂಕಾಲ ಬರಬಹುದು, ಸ್ವಲ್ಪ ಕಾದು ನೋಡಿ.

ಶ್ರೀ ಕಾಗೋಡು ತಿಮ್ಮಪ್ಪ.— ನಮಗೆ ಒಂದು ಮಾಹಿತಿ ಬರಿಸಿಕೊಳ್ಳುವರೆ ಒಳ್ಳೆಯದು. ಕಳೆದ ಶಾಸನಸಭೆಯಲ್ಲಿ ಅಡ್ಜರ್ನ್ ಆಗುವಕ್ಕೆ ಪ್ರಶ್ನೆಗಳನ್ನು ಮುತ್ತಿರಿಸ್ಯೂ ಮಾಡಿದ್ದೇವೆ. ಅವುಗಳಿಗೆ ಇದುವರೆಗೆ ಸರ್ಕಾರ ಉತ್ತರ ಕೊಡದೇ ಇರುವುದಕ್ಕೆ ಕಾರಣ ಏನು ?

Sri H. SIDDAVEERAPPA.—From tomorrow we will see that at least 10 questions are answered. ಏನು ಇನ್‌ಫರ್ಮೇಷನ್ ಕಲೆಕ್ಟ್ ಮಾಡುತ್ತಾರೆ ಅಷ್ಟನ್ನೂ ಕಳುಹಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರ ಹೇಗೆ ನಡೆಯುತ್ತಾ ಇದೆ ಎನ್ನುವುದು ಇವರಿಂದ ಸ್ಪಷ್ಟವಾಗುತ್ತದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳಿಗೆ ಈ ಸಭೆಯಲ್ಲಿ ಗೌರವ ಇಲ್ಲ ಪಕ್ಷದಲ್ಲಿ ಇಂಥಹ ಪರಿಸ್ಥಿತಿ ಬರುತ್ತಾ ಇರಲಿಲ್ಲ. ಸರ್ಕಾರಕ್ಕೆ, ಮಂತ್ರಿಮಂಡಲಕ್ಕೆ ಯಾವ ಮೌಲ್ಯ ಇತ್ತೋ ಅದು ತಮ್ಮ ಕಾಲದಲ್ಲಿ ಹಾಳಾಗಿ ಹೋಗುತ್ತಾ ಇವೆ. ನಾನು ಕಂಡದ್ದನ್ನು ಕಂಡ ಹಾಗೆ ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಯಾವಯಾವುದೋ ಸಮಯದಲ್ಲಿ ಯಾವಯಾವುದೋ ಬಾಣ ಹೊಡೆದರೆ ಅವು ತಗಲುವುದಿಲ್ಲ. ಈಗ ಅವರ ಅಸ್ತ್ರಗಳನ್ನು, ಬಾಣಗಳನ್ನು ಉಳಿಸಿಕೊಳ್ಳಲಿ. ಯಾವ ಸಮಯದಲ್ಲಿ ಹೊಡೆಯಬೇಕೋ ಆ ಸಮಯದಲ್ಲಿ ಹೊಡೆದರೆ ತಗಲುತ್ತದೆ. ಸಿಕ್ಕಾಪಟ್ಟೆ ಹೊಡೆದರೆ ಹಾಗೆಯೇ ಹೊರಟು ಹೋಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರು ಬಂದಿದ್ದಾರೆ ಅವರು ಪ್ರಶ್ನೆಗೆ ಉತ್ತರ ಕೊಡುತ್ತಾರೋ, ಅಥವಾ ರಾಜಿನಾಮೆ ಕೊಡುತ್ತಾರೋ ಈ ಎರಡರಲ್ಲಿ ಒಂದು ಹೇಳುವುದು ಒಳ್ಳೆಯದು. ಈ ಸದನದ ಕಾರ್ಯಕಲಾಪಗಳ ಬಗ್ಗೆ ಇಷ್ಟು ನಿರಾಸಕ್ತಿ ತೋರಿಸುವುದನ್ನು ನೋಡಿ, ಅವರಿಗೆ ಕೆಲಸ ನಿರ್ವಹಿಸುವುದಕ್ಕಾಗುವುದಿಲ್ಲ ಎಂದು ಕಾಣುತ್ತದೆ

ಶ್ರೀ ಎಚ್. ಡಿ. ದೇವೇಗೌಡ.—ನಾಳೆ ಕರ್ನಾಟಕ ಪ್ರಶ್ನೆಗಳಿಗೆ ಉತ್ತರ ಕೊಡಿಸುವ ವಿಚಾರ ಬೇರೆ. ಈಗ ಸಭೆಯ ಕೆಲಸ ಸುಗಮವಾಗಿರುವುದಕ್ಕೆ ಸರ್ಕಾರ ಸಭೆಯ ಅನುಕಂಪೀಯವರ್ ಅವಾಲಜಿ ಕೇಳಬೇಕು.

Sri H. SIDDAVEERAPPA.—The English language is so soft that we can easily get rid of it to meet the situation by saying sorry. We apologise. I have already told you.

CALLING ATTENTION TO MATTERS OF URGENT PUBLIC IMPORTANCE

(*i*) *re* : delapidated Condition of the Government High School Building Kudur, Magadi Taluk

Sri BETTASWAMY GOWDA (Kudur).—Madam Speaker, I call the attention of the Minister of State for Primary and Secondary Education, regarding the condition of the building of the Government (Ex-TDB) High School, Kudur, Magadi Taluk.

Smt. E. E. VAZ.—Minister of State for Primary and Secondary Education. I have to State as follows:-

In Government Order No. ED 40 SLB 70 dated 30th April 1971, sanction was accorded for taking over of local body high schools run by the Taluk Development Boards, Town Municipal Councils and Town Panchayats in the State, by Government on consent basis. The Taluk Development Board High School, Kudur, Magadi Taluk, Bangalore District is one such high school.

According to Government Order No. ED 15 LTS 72 dated 13-9-1972, the local authorities should transfer the school management unconditionally and the schools indcated in the Annexures to Government Order dated 30th April 1971, referred to above, shall be deemed to have been taken over with effect from 1st April 1971, subject to the execution of the agreement bonds etc., specified in para 5 (9) of the order dated 30th April 1971.

The execution of the agreement bonds in respect of the local body high schools taken over by the Government is yet to be completed.

The Taluk Development Board High School, Kudur, Magadi Taluk, which is now a school taken over by Government as per the orders referred to above, has a small tiled roof building situated on the outskirts of the village. The building was put up 25 years ago. Eversince the construction of the building, no attempts had been made by the Local body under whose control the school was, prior to its take over by Government to do the maintenance work or even the annual repairs for the last 25 years. The roof of the building is sagging, rafters and even the reepers are broken. The eastern